

# ಸುವರ್ಣಮುಖಿಯ ಚೆಲುವಿನ ಸೊಲ್ಲು ತೊಟ್ಟಿಕಲ್ಲು



ಬೆಂಗಳೂರಿನಿಂದ 35 ಕಿ.ಮೀ. ದೂರವಿರುವ ತೊಟ್ಟಿಕಲ್ಲು ಫಾಲ್ಸ್ ಸ್ವರ್ಣಮುಖಿ ನದಿಯ ಸೃಷ್ಟಿ. ಇದು ಕೇವಲ ನೋಡುವ ಜಲಪಾತವಲ್ಲ; ನೀರಿಗೆ ಬೆನ್ನು ಕೊಟ್ಟು ಸ್ನಾನ ಮಾಡಿ ಸುಖಿಸಬಹುದಾದ ಜಲಪಾತ.

**ಗುರು ಪಿ.ಎಸ್.**
ಚಿತ್ರಗಳು: ಎಂ.ಎಸ್. ಮಂಜುನಾಥ್

ಜಲಪಾತದ ವಿಡಿಯೊ ವೀಕ್ಷಣೆಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

'ಬೆಂಗಳೂರು ಹತ್ತಿರ ಇರಬೇಕು. ಒಂದೇ ದಿನದಲ್ಲಿ ಹೋಗಿ ಬರೋ ರೀತಿ ಇರಬೇಕು. ಹೋಗೋ ಪ್ಲೇಸ್ ಮಾತ್ರ ಸೂಪರ್ ಆಗಿರಬೇಕು...' – ಒಂದು ದಿನದ ಪಿಕ್‌ನಿಕ್ ಪ್ಲ್ಯಾನ್ ಮಾಡುತ್ತಿದ್ದ ನನ್ನ ಫ್ರೆಂಡ್‌ಗೆ ಈ ರೀತಿ ಷರತ್ತು ಹಾಕಿದೆ.

'ಹಾಗಾದರೆ, ಟಿಕೆ ಫಾಲ್ಸ್‌ಗೆ ಹೋಗೋಣ' ಎನ್ನುವ ಉತ್ತರ ತಕ್ಷಣವೇ ಬಂತು.

'ಟಿಕೆ ಫಾಲ್ಸಾ? ಎಲ್ಲಿದೆ? ಹೇಗೆ ಹೋಗೋದು? ಒಂದೇ ದಿನದಲ್ಲಿ ಹೋಗಿ ಬರೋಕಾಗುತ್ತಾ?'

'ಟಿಕೆ ಫಾಲ್ಸ್ ಅಂದರೆ, ತೊಟ್ಟಿಕಲ್ಲು ಫಾಲ್ಸ್ ಅಂತಾ. ಸ್ವರ್ಣಮುಖಿ ನದಿ ನೀರಿನಿಂದ ಉಂಟಾಗಿರುವ ಜಲಪಾತ. ಬೆಂಗಳೂರಿನಿಂದ 35 ಕಿ.ಮೀ. ದೂರ ಇದೆ. ಕನಕಪುರ ರೋಡ್‌ನಲ್ಲಿ ಹೋಗಬೇಕು, ಕಗ್ಗಲಿಪುರ ಹತ್ತಿರ' ಎಂದ.

ಒಂದೇ ದಿನದಲ್ಲಿ ಪ್ಲ್ಯಾನ್ ಮಾಡಿದ್ದಾಯ್ತು. ನಾನು, ನನ್ನ ಫ್ರೆಂಡ್ ಜೊತೆಗೆ, ಮತ್ತಿಬ್ಬರು ಫ್ರೆಂಡ್ಸ್ ಸೇರಿಕೊಂಡರು.

ಬೆಳಿಗ್ಗೆ 7ಕ್ಕೆ ಕಾರಿನಲ್ಲಿ ಹೊರಟೆವು. ರಾಜ್‌ಕುಮಾರ್ ಸಮಾಧಿ ರಸ್ತೆಯಿಂದ ತೆರಳಿ, ನೈಸ್ ರೋಡ್ ಮೂಲಕ ಕನಕಪುರ ರಸ್ತೆ ಕನೆಕ್ಟ್ ಆಗುವುದು ಉತ್ತಮ ಮತ್ತು ಸಂಚಾರ ದಟ್ಟಣೆಯೂ ಇರುವುದಿಲ್ಲ ಎಂದುಕೊಂಡು ಅದೇ ಮಾರ್ಗದಲ್ಲಿ ಸಾಗಿದೆವು.

ಕಗ್ಗಲಿಪುರದಲ್ಲಿ ಬ್ಯಾಲೆಮರದದೊಡ್ಡಿಗೆ ಹೋಗುವ ಮಾರ್ಗದಲ್ಲಿ ಸಾಗಿದರೆ, ಕಾರ್ನರ್‌ನಲ್ಲಿಯೇ ಒಂದು ಬೇಕರಿ ಇದೆ. ಅಲ್ಲಿಯೇ 'ಟಿಕೆ ಫಾಲ್ಸ್'ಗೆ ದಾರಿ ಎಂಬ ಬೋರ್ಡ್ ಕಾಣಿಸುತ್ತದೆ. ಹಾಗೇ, ಅಲ್ಲಿನ ಗ್ರಾಮಸ್ಥರನ್ನೂ ವಿಚಾರಿಸಿಕೊಂಡು ಜಲಪಾತದ ಬಳಿ ಹೋದಾಗ ಬೆಳಿಗ್ಗೆ 9 ಆಗಿತ್ತು.

ಅದಾಗಲೇ ಹಲವು ಕಾರು, ಬೈಕ್‌ಗಳು ಹಾಜರಿ ಹಾಕಿದ್ದವು. ಗ್ರಾಮದ ಹತ್ತಿರದವರೆಗೂ ಬಿಎಂಟಿಸಿ ಮತ್ತು ಖಾಸಗಿ ಬಸ್‌ಗಳು ಬರುವುದರಿಂದ, ಬಸ್‌ಗಳಲ್ಲಿ ಬಂದವರೂ ಜಲಪಾತದತ್ತ ಹೆಜ್ಜೆಹಾಕುತ್ತಿದ್ದರು. ಅಂದು ಶನಿವಾರ ಆಗಿದ್ದರಿಂದ ಪ್ರವಾಸಿಗರ ಸಂಖ್ಯೆ ತುಸು ಹೆಚ್ಚೇ ಇದೆ ಅನಿಸಿತು.

ಕಾರು ಪಾರ್ಕ್ ಮಾಡಿದ ಸ್ಥಳದಿಂದ